# ಅಂಗೈಯಲ್ಲಿ ಅರಮನೆ

## ತಂಗಿಯದು

ನನ್ನ ಮೊಮ್ಮಕ್ಕಳನ್ನು ಪುತ್ತೂರಿನಲ್ಲಿ ಸ್ಕೂಲಿಗೆ ಸೇರಿಸಿದ ಕಾರಣ ಬೆಂಗಳೂರಿನಿಂದ ನನ್ನ ಮಗಳು ಅಳಿಯ ಆಗಾಗ ಅವರನ್ನು ನೋಡಲು ಬರುತ್ತಿದ್ದರು. ಹೀಗೆಯೇ ಒಂದು ಭೇಟಿಯಲ್ಲಿ ಅವರು ಮಕ್ಕಳಿಬ್ಬರಿಗೂ ಒಂದೊಂದು ಬಬ್ಬಲ್ ಶೂಟರ್ ತೆಗೆಸಿಕೊಟ್ಟರು. ಅವರು ಹೊರಟ ನಂತರ ಮೊಮ್ಮಗನ ಕಣ್ಣಲ್ಲಿ ನೀರು ತುಂಬಿ ಬಂತು. 'ಯಾಕಪ್ಪ ಅಳು' ನಾನು ಕೇಳಿದೆ. 'ಅವರು ಕೊಟ್ಟ ಬಬ್ಬಲ್ ಶೂಟರ್‌ನಿಂದ ಹೇಗೆ ಆಡಲಿ ಅಜ್ಜಿ, ಅವರ ನೆನಪು ತುಂಬಾ ಆಗುತ್ತೆ' ಎಂದು ಜೋರಾಗಿ ಅತ್ತ. ನನಗೋ ತುಂಬಾ ಬೇಜಾರು. ಹೇಗೋ ಸಮಾಧಾನ ಪಡಿಸಿದಾಗ ಅಳು ನಿಲ್ಲಿಸಿದ.

ಸಂಜೆ ಶಾಲೆಯಿಂದ ಬಂದವನ ಕೈಯಲ್ಲಿದೆ ಬಬ್ಬಲ್ ಶೂಟರ್. 'ಏನೋ ಬೆಳಗ್ಗೆ ಹೇಳಿದ್ದೆಯಲ್ಲ ಅಮ್ಮನ ನೆನಪಾಗುತ್ತೆ ಅಂತ?' ಎಂದು ಕೇಳಿದೆ. 'ಹೌದು ಅಜ್ಜಿ ಇದು ನನ್ನದಲ್ಲ, ತಂಗಿಯದ್ದು' ಅವನೆಂದಾಗ ನನಗೆ ನಗುವೋ ನಗು


ಕಲೆ: ಗಣೇಶ ಆಚಾರ್ಯ

**ಲಕ್ಷ್ಮಿ ವಿ. ಶೆಣೊಯ್**

---



## ಏಲಕ್ಕಿ ಬಾಳೆಹಣ್ಣು

ಅಮ್ಮ: 'ಏನೋ ಗುಂಡಾ, ಪೂಜೆಗೆ ಏಲಕ್ಕಿ ಬಾಳೆಹಣ್ಣು ತಗೊಂಡು ಬಾ ಅಂದ್ರೆ, ಇದೇನೋ?

ಗುಂಡಾ: ಯಾಕಮ್ಮ? ಏನಾಯ್ತು?

ಅಮ್ಮ: ಏಲಕ್ಕಿ ಪ್ಯಾಕೆಟ್ಟು, ಬಾಳೆಹಣ್ಣು ಎರಡೂ ತಂದಿದೀಯಲ್ಲ?

ಗುಂಡಾ: ಹ್ಞೂ..ನೀನೇ ಹೇಳಿದ್ಯಲ್ಲಮ್ಮ

ಅಮ್ಮ: ಅಯ್ಯೋ, ಅದೇ ಕಣೋ, ಏಲಕ್ಕಿ ಬಾಳೆಹಣ್ಣು ಅಂದ್ರೆ ಆ ವೆರೈಟಿ ಅಂತ ನಾನು ಹೇಳಿದ್ದು.

ಗುಂಡಾ: 'ದೇವ್ರಿಗೂ ದಿನಾ ಅದೇ ವೆರೈಟಿ ಬೇಜಾರಾಗಿರುತ್ತೆ ಬಿಡಮ್ಮ. ಅದಕ್ಕೇ ಹೊಸ ವರ್ಷದ ಸ್ಪೆಷಲ್ ನೈವೇದ್ಯ ಅಂತ ದೇವ್ರಿಗೆ ಹೇಳ್ಬಿಡಮ್ಮ!.

**ಸುಮನಾ**